ದಿನಾಂಕ:13.02.2026 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಬಿ ಎಲ್ ಎಸ್ ವಕೀಲರಿಂದಃ**

ನಾನು ಹಾಜರು ಪಡಿಸಿದ ದಾಖಲೆಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ದಾವಾ ಷೆಡ್ಯೂಲ್ ಐಟಂ ನಂಬರ್.4 ನ ರಿ ಸರ್ವೆ ನಂ. 11/1 ಆಗಿರುತ್ತದೆ. ಸರ್ವೆ ನಂ.11/1 ಒಟ್ಟು 7 ಎಕರೆ 10 ಗುಂಟೆ ವಿಸ್ತೀರ್ಣವಿದೆ . ದಾವಾದಲ್ಲಿ ತಿಳಿಸಿದ ಅಂಶಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ದಾವಾ ಐಟಂ ನಂ.4 ನ್ನು 11/1 ಎಂದು ಬರೆಸಿರುತ್ತೇನೆ. ಸರ್ವೆ ನಂ.11 ಒಟ್ಟು ವಿಸ್ತೀರ್ಣ ಎಷ್ಟು ಇದೆ ಎಂದರೆ ಸಾಕ್ಷಿ 11/1, 7 ಎಕರೆ 10 ಗುಂಟೆ ಇದೆ ಎಂದು ನುಡಿಯುತ್ತಾರೆ. ದಾವಾ ರಿ ಸರ್ವೆ ನಂ.11 ಎಷ್ಟು ಪೋಡಾಗಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಐಟಂ ನಂ.4 ರ ಆಸ್ತಿ ನಮ್ಮ ಪಿತ್ರಾರ್ಜಿತ ಆಸ್ತಿ ಎಂದು ದಾವೆಯಲ್ಲಿ ಹೇಳಿರುತ್ತೇವೆ. 11/1 ರುದ್ರಪ್ಪ ಬಿನ್ ದಾಸಪ್ಪ ಇವರ ಹೆಸರಿನಲ್ಲಿ ಇತ್ತು . ರಿ ಸರ್ವೆ ನಂ.11/2 ಎಷ್ಟು ವಿಸ್ತೀರ್ಣ ಇದೆ ಎಂಬ ಪ್ರಶ್ನೆಗೆ ಸಾಕ್ಷಿ ಸರ್ವೆ ನಂ.11/2 ರಲ್ಲಿ ಲಕ್ಷ್ಮೀಪತಿಗೆ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ನಿಪಿ-22 ರಲ್ಲಿ ಸರ್ವೆ ನಂ.11/2 ರ ವಿಸ್ತೀರ್ಣ 5 ಎಕರೆ 21 ಗುಂಟೆ ಇದೆ ಎಂದರೆ ಸರಿಯಲ್ಲ. ಆ ದಾಖಲೆಯು ಆಲಮ್ಮ ಕೋಂ ಗುಂಡುದಾಸಪ್ಪ ಇವರ ಹೆಸರಿಗೆ ಇದೆ ಎಂದರೆ ಸಾಕ್ಷಿ ಅದು ನನ್ನ ತಂದೆಯ ಅಕ್ಕನ ಹೆಸರು ಎಂದು ಹೇಳುತ್ತಾರೆ. ಸರ್ವೆ ನಂ.11/2 ರ ಮೇಲೆ ನಾನು ಆಲಮ್ಮ ಕೋಂ ಗುಂಡುದಾಸಪ್ಪ ಇವರ ಮೇಲೆ ಕೇಸ್ ಹಾಕಿಲ್ಲ ಸಾಕ್ಷಿ ಮುಂದುವರೆದು ಸರ್ವೆ ನಂ.11 ರ ಮೇಲೆ ಕೇಸ್ ಹಾಕಿದ್ದೇನೆ ಎಂದು ನುಡಿಯುತ್ತಾರೆ.

ಸರ್ವೆ ನಂ.11/2 ಐಟಂ ನಂ.4 ರ ಪೂರ್ವಕ್ಕೆ ಕೆಂಚಪ್ಪನ ಹೊಲ , ಪಶ್ಚಿಮಕ್ಕೆ ಆಲಮ್ಮ ಗುಂಡುದಾಸಪ್ಪ ಇವರ ಜಮೀನು ಇದೆ . ಆಲಮ್ಮ ಗುಂಡುದಾಸಪ್ಪನ ಸರ್ವೆ ನಂ.11/2 ಆಗಿರುತ್ತದೆ. ಅದರ ಉತ್ತರಕ್ಕೆ ಕರಿಯಪ್ಪನ ಹೊಲ ಇದೆ. ದಕ್ಷಿಣಕ್ಕೆ ಚಿಕ್ಕಪ್ಪನ ಜಮೀನು ಇದೆ.

ಸರ್ವೆ ನಂ.11/1 ರ ಚೆಕ್ಕು ಬಂಧಿ ಸರ್ವೆ ನಂ.11/2 ರ ಚೆಕ್ಕು ಬಂಧಿಯಂತೆ ಇರುತ್ತದೆ. ಸರ್ವೆ ನಂ.11/1 ರ 7 ಎಕರೆ 10 ಗುಂಟೆ ಉಗ್ರಪ್ಪ ಬಿನ್ ದಾಸಪ್ಪನವರ ಹೆಸರಿಗೆ ಇದೆ ಎಂದರೆ

ನಿಜ. ಸರ್ವೆ ನಂ.11/2 ರ 5 ಎಕರೆ 21 ಗುಂಟೆ ಆಲಮ್ಮ ಕೋಂ ಗುಂಡುದಾಸಪ್ಪನ ಹೆಸರಿಗೆ ಇದೆ ಎಂದರೆ ನಿಜ. ಸಾಕ್ಷಿ 7 ಎಕರೆ 10 ಗುಂಟೆ ಜಮೀನು ನನ್ನದು ಎಂದು ನುಡಿಯುತ್ತಾರೆ. ದಾವಾ ಷಢ್ಯೂಲ್ ಐಟಂ ನಂ.4 ಕ್ಕೆ , ನಮ್ಮ ದಾಖಲೆಗೂ ಮತ್ತು ನಾನು ಹೇಳುತ್ತಿರುವ ಹೇಳಿಕೆಗೂ ಸಂಪೂರ್ಣ ವ್ಯತ್ಯಾಸವಿದೆ ಎಂದರೆ ಸರಿಯಲ್ಲ.

ರಿ ಸರ್ವೆ ನಂ.11/2 ಈಗ ಲಕ್ಷ್ಮಿಪತಿ ಹೆಂಡತಿ ರಂಗಮ್ಮನ ಹೆಸರಿಗೆ ಮಾಡಿಸಿರುತ್ತಾನೆ. ಸಾಕ್ಷಿ ಮೋಸ ಮಾಡಿ ಮಾಡಿಸಿರುತ್ತಾನೆ ಎಂದು ನುಡಿಯತ್ತಾರೆ. ರಂಗಮ್ಮ ಎಂದರೆ ನನ್ನ ಅಕ್ಕನಾದ ಪಾರ್ವತಮ್ಮನ ಮಗಳು ಎಂದರೆ ನಿಜ. ಪಾರ್ವತಮ್ಮನಿಗೆ ಸೀತಾರಾಮ , ಲಕ್ಷ್ಮೀಕಾಂತ , ದಾಸಣ್ಣ , ದಯಾವತಿ ಎಂಬ ಮಕ್ಕಳು ಇದ್ದಾರೆ ಎಂದರೆ ಸಾಕ್ಷಿ ಅವರು ಈಗ ಯಾರು ಇಲ್ಲ ಎಂದು ನುಡಿಯುತ್ತಾರೆ. ಸೀತಾರಾಮ , ಲಕ್ಷ್ಮೀಕಾಂತ , ದಾಸಣ್ಣ , ದಯಾವತಿಗೆ ಮದುವೆಯಾಗಿತ್ತು . ಲಕ್ಷ್ಮೀಕಾಂತನ ಹೆಂಡತಿ ಇದ್ದಾರೆ ಅವರ ಹೆಸರು ಗೊತ್ತಿಲ್ಲ. ದಯಾವತಿಗೆ ಮಕ್ಕಳು ಇದ್ದಾರೆ ಅವರ ಹೆಸರು ಗೊತ್ತಿಲ್ಲ. ರಿ . ಸರ್ವೆ ನಂ.11/2 ರಂಗಮ್ಮನ ಹೆಸರಿಗೆ ಲಕ್ಷ್ಮೀಪತಿ ಮೋಸ ಮಾಡಿ ಮಾಡಿರುತ್ತಾನೆ. ನನಗೆ ಜಾನಕಮ್ಮ ಎನ್ನುವ ಅಕ್ಕ ಇದ್ದಾರೆ ಎಂದರೆ ಸರಿ . ಸದರಿ ಜಾನಕಮ್ಮ ಜೀವಂತವಾಗಿಲ್ಲ. ಜಾನಕಮ್ಮನಿಗೆ ಇಬ್ಬರು ಮಕ್ಕಳು ಇದ್ದು ಅವರು ಮೃತ ಪಟ್ಟಿದ್ದಾರೆ ಅವರ ಹೆಸರು ಗಂಗಾಧಾರ , ನೀಲಕಂಠ ಮೂರ್ತಿ . ಜಾನಕಮ್ಮನಿಗೆ ಲಕ್ಷ್ಮಕ್ಕ , ವಿನೋದಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ ಎಂದರೆ ನಿಜ. ಅವರು ಜೀವಂತವಾಗಿರುತ್ತಾರೆ .

ನಾಗವೇಣಿ ಹೆಸರಿನಲ್ಲಿರುವ ದಾನ ಪತ್ರವು ನಮಗೆ ಬಾದಕವಲ್ಲ ಎಂದು ದಾವೆಯಲ್ಲಿ ಕೇಳಿರುತ್ತೇನೆ. ಸರ್ವೆ ನಂ.16/1 ಎಷ್ಟು ವಿಸ್ತೀರ್ಣ ಇತ್ತು ಎಂದರೆ 6 ಎಕರೆ 13 ಗುಂಟೆ ಇದೆ. ಸರ್ವೆ ನಂ.16 ಮೂರು ಪೋಡುಗಳಾಗಿದೆ , ಸರ್ವೆ ನಂ.16/1 , 4 ಎಕರೆ 8 ಗುಂಟೆ ಸರ್ವೆ ನಂ.16/2 , 2 ಎಕರೆ 33 ಗುಂಟೆ ಸರ್ವೆ ನಂ. 16/3 , 3 ಎಕರೆ ಇದೆ . ನಾನು ದಾವೆಯಲ್ಲಿ

ಐಟಂ ನಂ.3 ನ್ನು 3 ಎಕರೆ ಎಂದು ಬರೆಸಿರುತ್ತೇನೆ. ಸರ್ವೆ ನಂ.16/3 , 6 ಎಕರೆ 14 ಗುಂಟೆ ಎಂದು ಬರೆಸಿದ್ದೇನೆ ಎಂದರೆ ನಿಜ.

ಸರ್ವೆ ನಂ.16/3, 6 ಎಕರೆ 14 ಗುಂಟೆಯಲ್ಲಿ 3 ಎಕರೆ 14 ಗುಂಟೆ ಕೆಂಚಮ್ಮನ ಹೆಸರಿಗೆ ಮಾರಾಟ ಮಾಡಿರುತ್ತಾರೆ ಉಳಿದ 3 ಎಕರೆ ನರಸಿಂಹ ಮೂರ್ತಿಯವರ ಹೆಸರಿಗೆ ಇದೆ. ಸದರಿ 3 ಎಕರೆಗೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ನೀವು ಕನ್ನಡದಲ್ಲಿ ಅಥವಾ ಇಂಗ್ಲೀಷ್ ನಲ್ಲಿ ಸಹಿ ಮಾಡುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ಇಂಗ್ಲೀಷ್ ನಲ್ಲಿ ಸಹಿ ಮಾಡುತ್ತೇನೆ ಎಂದು ನುಡಿಯುತ್ತಾರೆ.

ಸರ್ವೆ ನಂ.16/3 ರಲ್ಲಿ ಉಳಿದ ಮೂರು ಎಕರೆ ಜಮೀನನ್ನು ಸುನಂದಮ್ಮ ಇವರು ಧನಲಕ್ಷ್ಮಿ ಇವರಿಗೆ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿ ನಾನು ಬರೆದುಕೊಟ್ಟಿಲ್ಲ ಅವರು ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಸುನಂದಮ್ಮ ಇವರು ಧನಲಕ್ಷ್ಮಿ ಇವರಿಗೆ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿದ್ದಾರೆ ಎಂಬ ವಿಚಾರ ನನಗೆ ಗೊತ್ತಿರಲಿಲ್ಲ ಬರೆದು ಕೊಟ್ಟ ನಂತರ ನನಗೆ ಗೊತ್ತಾಗಿರುತ್ತದೆ. ಆ ಖುಲಾಸೆ ಪತ್ರಕ್ಕೆ ನೀವು ಸಾಕ್ಷಿಯಾಗಿ ಸಹಿ ಮಾಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ತಾಲೂಕು ಕಛೇರಿಯಲ್ಲಿ ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿದ್ದೇನೆ ಅದರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಸಹಿ ಮಾಡುವಾಗ ನಾನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಶಿರಾ ತಾಲೂಕು ಕಛೇರಿಯಲ್ಲಿ ಸಹಿ ಮಾಡಿದ್ದೇನೆ. ಮಧು ಎನ್ನುವವರು ನನ್ನನ್ನು ಶಿರಾ ತಾಲುಾಕು ಕಛೇರಿಗೆ ಕರೆದುಕೊಂಡು ಹೋಗಿರುತ್ತಾರೆ. ಆ ದಿನ ಮಧು ಎಂಬುವವರು ನನ್ನನ್ನು ಕರೆದು ಕೊಂಡುಹೋಗಿಲ್ಲ ನಾನೇ ಸ್ವ ಇಚ್ಚೆಯಿಂದ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸುನಂದಮ್ಮನವರು ತಮ್ಮ ಹಿಸ್ಸೆಯನ್ನು ಧನಲಕ್ಷ್ಮಿಗೆ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿ ಸುನಂದಮ್ಮ ಬಿಟ್ಟುಕೊಟ್ಟಲ್ಲಿ ನಮಗೂ ಮತ್ತು ಪ್ರತಿವಾದಿಗೂ ಸಮಾನವಾದ ಹಕ್ಕು ಬರುತ್ತದೆ ಎಂದು ಹೇಳಿ ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ.

ಲಕ್ಷ್ಮೀಪತಿ ಮತ್ತು ನರಸಿಂಹ ಮೂರ್ತಿಯವರು ವೆಂಕಟಾಚಲ ಶೆಟ್ಟಿಯಿಂದ ಆಸ್ತಿಯನ್ನು ಕ್ರಯಕ್ಕೆ ಪಡೆದಿದ್ದರಿಂದ ಅದು ಅವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮಾರಾಟ ಮಾಡುತ್ತೇನೆ ಎಂದು ಹೇಳಿ ಪುನಃ ಖರೀದಿ ಮಾಡುತ್ತಾರೆ ಎಂದು ನುಡಿಯುತ್ತಾರೆ.

ಎ ಸಿ ನ್ಯಾಯಾಲಯದವರು ಮೂರು ತಿಂಗಳು ಗಡುವು ಕೊಟ್ಟು ನಾಡ ಕಛೇರಿಗೆ ಕೇಸ್ ಕಳುಹಿಸಿಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ನಾಡ ಕಛೇರಿಯವರು ವಿವರಣೆ ಕೊಡಿ ಎಂದು ಕೇಳಿದ್ದರೂ ಕೂಡ ನಾನು ನಾಡಕಛೇರಿಗೆ ಹೋಗಿಲ್ಲ ಎಂದರೆ ಸರಿಯಲ್ಲ. 15.01.1978 ರ ಹಕ್ಕು ಖುಲಾಸೆ ಪತ್ರದ ಪ್ರಕಾರ ಖಾತೆ ಬದಲಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಇಲ್ಲದಿದ್ದರೂ ಕೂಡ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**2 ನೇ ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಪ್ರತಿವಾದಿ 1(ಇ) ವಕೀಲರು ಸಮಯ ಕೋರಿದ್ದು ಕೋರಿಕೆಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**4 ನೇ ಪ್ರತಿವಾದಿಗಳ ಪರ ವಕೀಲರು ಗೈರು ಹಾಜರು ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು